ಶ್ರೀ ರತ್ನ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್
ಸರ್ವೆ ನಂ: 26/5, ಮೊದಲನೇ ಮಹಡಿ, ನ್ಯೂ ಬ್ಯಾಂಕ್ ಕಾಲೋನಿ, ಅಮೃತನಗರ ಮುಖ್ಯ ರಸ್ತೆ, ಕೋಣನಕುಂಟೆ
ಬೆಂಗಳೂರು–560062

# 2019-20ನೇ ಸಾಲಿನ ಆಡಳಿತ ಮಂಡಲಿಯ ವರದಿ

ಸನ್ಮಾನ್ಯ ಸದಸ್ಯರೆ,

ನಿಮ್ಮ ಶ್ರೀ ರತ್ನ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್ ಮೂರನೇ ವಾರ್ಷಿಕ ಸರ್ವ ಸದಸ್ಯರ ವರ್ಚ್ಯುಯಲ್ ಸಭೆಯನ್ನು ದಿನಾಂಕ:19/12/2020 ಬೆಳಗ್ಗೆ:10:30ಕ್ಕೆ ಸರಿಯಾಗಿ, ಕರೆಯಲಾಗಿದೆ. ಈ ಸಭೆಯ ಸೂಚನಾ ಪತ್ರವನ್ನು ಈಗಾಗಲೇ ತಮಗೆ ಕಳುಹಿಸಲಾಗಿದೆ. ತಮ್ಮೆಲ್ಲರನ್ನು ಆಡಳಿತ ಮಂಡಲಿಯು ಈ ಸಭೆಗೆ ಹಾರ್ಧಿಕವಾಗಿ ಸ್ವಾಗತಿಸುತ್ತದೆ. ನಿಮ್ಮ ಸಂಘವು ಸಹಕಾರ ಸಂಘಗಳ ನಿಬಂದಕರು, ಕರ್ನಾಟಕ ರಾಜ್ಯ, ಬೆಂಗಳೂರು ಅವರ ಆದೇಶ ಸಂಖ್ಯೆ:
ಯುಬಿಸಿ–1/428/ಆರ್‌ಜಿನ್/49106/2016–17 ದಿನಾಂಕ: 23–11–2017 ರಂತೆ ನೋಂದಯಿಸಲ್ಪಟ್ಟದೆ. 2019–20ಕ್ಕೆ ಸಂಘವು ಎರಡು ವರ್ಷದ ಪೂರ್ತಿ ವಹಿವಾಟು ನಡೆಸಿದ್ದು, ಉತ್ತಮ ಫಲಿತಾಂಶಗಳು ಬಂದಿವೆ ಎಂದು ತಿಳಿಸಲು, ನಿರ್ದೇಶಕ ಮಂಡಲಿ ಹರ್ಷಿಸುತ್ತದೆ.

ಪ್ರಸಕ್ತ ಸಾಲಿನಲ್ಲಿ, ಸಂಘವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ, ಎಂದು ತಿಳಿಸಲು ಸಹ ಆಡಳಿತ ಮಂಡಲಿಯು ಹರ್ಷಿಸುತ್ತದೆ. ಕಳೆದ ಸಾಲಿನಲ್ಲಿ, ಖರ್ಚು ವೆಚ್ಚಗಳ, ಇಳಿಕೆ ಮತ್ತು ಆದಾಯಗಳ ಹೆಚ್ಚಳದಿಂದಾಗಿ, ಸಂಘವು ರೂ.24,33,280 ಲಾಭವನ್ನುಗಳಿಸಿದೆ, ಎಂಬುದು ಹೆಮ್ಮೆಯ ವಿಷಯವಾಗಿದೆ. ಇದಕ್ಕೆ ಪೂರಕವಾಗಿ, ಈ ವರದಿಯ ಮುಂದಿನ ಪುಟಗಳಲ್ಲಿ ಅಂಕಿ ಅಂಶಗಳನ್ನು ನೀಡಲಾಗಿದೆ. ಸಂಘದ ಅಭಿವೃದ್ಧಿಗೆ, ಸದಸ್ಯರುಗಳಾದ ನಿಮ್ಮ ಪಾತ್ರ ಹಿರಿದು ಎಂಬುದರಲ್ಲಿ ಸಂಶಯ.

ಸನ್ಮಾನ್ಯ ಸದಸ್ಯರು ಇದನ್ನು ಮನಗಂಡು ಎಂದಿನಂತೆ ಸಹಕರಿಸಬೇಕಾಗಿ ವಿನಂತಿಸಿ ಕೊಳ್ಳುತ್ತೇವೆ.

ಮಂಡಲಿಯ ಸದಸ್ಯರು:

ಶ್ರೀಯುತ/ ಶ್ರೀಮತಿ
1. ಕೆ.ಬಿ.ಲಕ್ಷ್ಮಣ್ ಅಧ್ಯಕ್ಷರು
2. ಎಲ್.ಶ್ರೀಧರ್ ಉಪಾಧ್ಯಕ್ಷರು
3. ಎಲ್.ರವಿ
4. ಜಿ.ನಾಗರಾಜ
5. ಎಲ್.ಕುಮಾರ್
6. ಎನ್.ಕಿರಣ್
7. ಸಿ.ಚಂದ್ರಶೇಖರ್
8. ಎಲ್.ಮಂಜುನಾಥ
9. ಬಿ.ಭಾಗ್ಯ
10. ಎನ್.ಸವಿತ

11. ಕೆ.ಆರುಣ ಕುಮಾರ್

12. ಜಿ.ಯದುನಂದನ್

13. ಟಿ.ಮುನಿರಾಜು

ವರದಿ ಸಾಲಿನಲ್ಲಿ ಆಡಳಿತ ಮಂಡಲಿ, 12 ಬಾರಿ ಸಭೆ ಸೇರಿ, ಠೇವಣಿಗಳು, ಸಾಲ ಮುಂಗಡಗಳು ಸಂಘದ ಆಡಳತ, ಅಭಿವೃದ್ಧಿ, ಸಾದಿಸಬೇಕಾಗಿರುವ ಗುರಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ಕೂಲಂಕಶವಾಗಿ ಚರ್ಚಿಸಿ, ಸೂಕ್ತ ನಿರ್ಧಾರಗಳನ್ನು ಕೈಗೂಂಡು ಸಂಘದ, ಮುಖಾಂತರ ಕಾರ್ಯ ರೂಪಕ್ಕೆ ತರುವಲ್ಲಿ ಯಶಸ್ವಿಯಾಗಿದೆ.

## ಸಾಲ ಉಪಸಮಿತಿ

ಶ್ರೀಯುತ 1. ಕೆ.ಬಿ.ಲಕ್ಷ್ಮಣ್

2. ರವಿ.ಎಲ್

3. ಕುಮಾರ್.ಎಲ್

4. ಜಿ. ನಾಗರಾಜ್

ವರದಿ ಸಾಲಿನಲ್ಲಿ ಸಾಲ ಉಪಸಮಿತಿಯು 12 ಬಾರಿ ಸಭೆ ಸೇರಿ, ಸಾಲದ ಅರ್ಜಿಗಳನ್ನು ಕೂಲಂಕಶವಾಗಿ ಪರಿಶೀಲಿಸಿ ಸಾಲಗಾರರು, ಜಾಮೀನುದಾರರು, ಸಾಲಕ್ಕೆ ನೀಡಿರುವ ಭದ್ರತೆ, ಅವುಗಳ ಮೌಲ್ಯ ದಾಖಲಾತಿಗಳ ನಿಖರತೆ, ಸಲಹೆಗಾರರ ವರದಿ, ಆದಾಯದ ಮೂಲ, ಮರು ಪಾವತಿ ಸಾಮರ್ಥ್ಯ ಮುಂತಾದ ವಿವರಗಳನ್ನು ಪರಿಶೀಲಸಿ ಸಾಲಗಳನ್ನು ಮಂಜೂರು ಮಾಡಲಾಗುತ್ತಿದೆ. ಇದರಿಂದಾಗಿ, ಇಲ್ಲಿಯವರೆಗೆ ಸಾಲ ಮರುಪಾವತಿಯು ಹೆಚ್ಚಿನ ರೀತಿಯ ವಿಳಂಬವಾಗಿಲ್ಲ ಎಂದು ತಿಳಿಸಲು ಹರ್ಷಿಸುತ್ತೇವೆ.

## ಆರ್ಥಿಕ ಫಲಿತಾಂಶಗಳು

ಲಕ್ಷ ರೂಗಳಲ್ಲಿ

| ಕ್ರಮ ಸಂಖ್ಯೆ | ವಿವರ | 2020–21ಕ್ಕೆ ಹೊಂದಲಾಗಿದ್ದ ಗುರಿ | 2019–20ರ ಸಾಧನೆ |
|---|---|---|---|
| 1 | ಷೇರು ಬಂಡವಾಳ | 3800 | 4090 |
| 2 | ಠೇವಣಿಗಳು | 80000 | 77019 |
| 3 | ಸದಸ್ಯರ ಸಂಖ್ಯೆ | 1000 | 1500 |
| 4 | ಸಾಲದ ವಿತರಣೆ | 60000 | 40694 |
| 5 | ಲಾಭ | +2467 | +2433 |
| 6 | ದುಡಿಯುವ ಬಂಡವಾಳ | 86267 | 81602 |

## ಸದಸ್ಯರ ಷೇರು ಬಂಡವಾಳ

ವರ್ಷದ ಪ್ರಾರಂಭದಲ್ಲಿ ಷೇರು ಖಾತೆಯಲ್ಲಿ ರೂ.31, 59,250 ಇದ್ದು, ಪ್ರಸಕ್ತ ವರ್ಷದಲ್ಲಿ ರೂ.10, 90,385 ಹೆಚ್ಚಾಗಿ ಸಂಗ್ರಹವಾಗಿ, ವರ್ಷದ ಕೊನೆಯಲ್ಲಿ ರೂ. 40, 90,385 ಇರುತ್ತದೆ. ಇದು ಕಳೆದ ಸಾಲಿಗೆ ಹೋಲಿಸಿದರೆ, ಶೇ 30 ರಷ್ಟು ಹೆಚ್ಚಾಗಿರುತ್ತದೆ.

## ಠೇವಣಿ ಸಂಗ್ರಹಣೆ

ಕಳೆದ ಸಾಲಿನಲ್ಲಿ (2018-19) ಠೇವಣಿ ಸಂಗ್ರಹಣೆ ರೂ.6, 65, 17,227 ಗಳಾಗಿದ್ದವು ಹಾಗೂ ಪ್ರಸಕ್ತ ಸಾಲಿನಲ್ಲಿ ರೂ.7, 70, 19,399 ರೂಗಳಿದ್ದು ರೂ.10, 502,172 ಗಳಷ್ಟು ಹೆಚ್ಚವರಿ ಸಂಗ್ರಹವಾಗಿದ್ದು, ಶೇ 16ರಷ್ಟು ಹೆಚ್ಚಳವಾಗಿದೆ. ಉಳಿತಾಯ ಠೇವಣಿ, ಮರುಹೂಡಿಕೆ ಠೇವಣಿ ಹಾಗೂ ಮರುಕಳಿಸುವ ಠೇವಣಿಗಳಲ್ಲಿ ಗಮನಾರ್ಹ ಪ್ರಗತಿಯನ್ನು ಸಾಧಿಸಿರುವುದನ್ನು ಗಮನಿಸಬಹುದಾಗಿದೆ.

## ಹೂಡಿಕೆಗಳು

2017-18ನೇ ಸಾಲಿನಲ್ಲಿ ಸಂಘವು, ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ನಿಯಮಿತ ಇಲ್ಲಿ 3ಕೋಟಿ ಹಣವನ್ನು ತೊಡಗಿಸಿದೆ.

## ಅಧಿಕ ವೆಚ್ಚದ ಅನುಮೋದನೆ

ಲಕ್ಷ ರೂಗಳಲ್ಲಿ

| ಕ್ರಮ ಸಂಖ್ಯೆ | ಖಾತೆಯ ವಿವರ | ಅನುಮೋದಿತ ವೆಚ್ಚ | ಒಟ್ಟು ಖರ್ಚು | ಹೆಚ್ಚುವರಿ | ಕಾರಣಗಳು |
|---|---|---|---|---|---|
| 1 | ಸಾದಿಲ್ವಾರು | 6000 | 6755 | 755 | ಖರ್ಚು ಹೆಚ್ಚಾದುದರಿಂದ |
| 2 | ವಿದ್ಯುಚ್ಛಕ್ತಿ | 25000 | 26418 | 1418 | ವಿದ್ಯುಕ್ತಿ ಬಿಲ್ ಹೆಚ್ಚಾದುದರಿಂದ |
| 3 | ಬಾಡಿಗೆ | 126000 | 132600 | 6600 | ಟಿಡಿಎಸ್ ಮಾಡಿದ್ದರಿಂದ |
| 4 | ಸುದ್ದಿ ಪತ್ರಿಕೆ | 4000 | 4626 | 626 | ಪತ್ರಿಕೆ ಬಿಲ್ ಹೆಚ್ಚಾದುದರಿಂದ |
| 5 | ಆಡಿಟ್ ಶುಲ್ಕ | 50000 | 54000 | 4000 | ಟಿ.ಡಿ.ಎಸ್ ಮಾಡಿದ್ದರಿಂದ |
| 6 | ಸೆಕ್ಯೂರಿಟಿ | 3,20,000 | 3,70,735 | 50,735 | ಸೆಕ್ಯೂರಿಟಿ ಚಾರ್ಜಸ್ ಹೆಚ್ಚಳದಿಂದಾಗಿ |
| 7 | ಗುರುತೀನ ಚೀಟಿ | 20000 | 20832 | 832 | ಸದಸ್ಯರ ಹೆಚ್ಚಳದಿಂದಾಗಿ |
| 8 | ಜಾಹೀರಾತು ಶುಲ್ಕ | 50000 | 143100 | 93100 | ಸಂಘದ ಪ್ರಾರಂಭದಲ್ಲಿ ಹೆಚ್ಚಿನ ಜಾಹೀರಾತನ್ನು ನೀಡಿದ್ದರಿಂದ |

## ಲಾಭಗಳಿಕೆ

ವರದಿ ಸಾಲಿನಲ್ಲಿ ಸಂಘವು ರೂ.24, 33,280 ಲಾಭವನ್ನು ಗಳಿಸಿದೆ ಎಂದು ತಿಳಿಸಲು ಆಡಳಿತ ಮಂಡಲಿಯು, ಹರ್ಷಿಸುತ್ತದೆ. ಹಿಂದಿನ ಸಾಲಿನಲ್ಲಿ (ಅಂದರೆ 2018-19) ರೂ.21, 43,304 ನಷ್ಟವನ್ನು ಅನುಭವಿಸಿತ್ತು. ಇದನ್ನು ತಮ್ಮ ಅನುಮತಿಯ ಮೇರೆಗೆ, ಕಾಯಿಟ್ಟು ನಿಧಿಗೆ ವರ್ಗಾವಣೆ ಮಾಡಲಾಗುವುದು.

## ಲಾಭಾಂಶದ ವಿತರಣೆ

ಅಂದರೆ, 2017–18 ಹಾಗೂ ಪ್ರಸಕ್ತ ಸಾಲಿನಲ್ಲಿ 2019–20 ರಲ್ಲಿ ಸಂಘವು ಲಾಭಗಳಿಸಿದೆ ಅದನ್ನು ಹಿಂದಿನ ಸಾಲಿನ ನಷ್ಟಕ್ಕೆ ಸರಿದೂಗಿಸಿದ ಪ್ರಯುಕ್ತ ಲಾಭಾಂಶದ ವಿತರಣೆಯನ್ನು ಮಾಡಲಾಗಿಲ್ಲ

ಗುರುತಿನ ಚೀಟಿ

ಗುರುತಿನ ಚೀಟಿಯನ್ನು ಸದಸ್ಯರಿಗೆ ವಿತರಿಸುವುದು ಮತ್ತು ಸದಸ್ಯರು ಅದನ್ನು ಪಡೆಯುವುದು ಕಾನೂನುರನ್ವಯ ಅವಶ್ಯವಾಗಿರುತ್ತದೆ ಈಗಾಗಲೇ ಗುರುತಿನ ಚೀಟಿಯನ್ನು ಪಡೆಯದೇ ಇದ್ದ ಸದಸ್ಯರು ಸಂಘದ ಕಛೇರಿಯಲ್ಲಿ ಗುರುತಿನ ಚೀಟಿಯನ್ನು ಪಡೆಯಬೇಕಾಗಿ ಪ್ರಾರ್ಥನೆ.

ಮುಂಬರುವ ಸರ್ವಸದಸ್ಯರ ಸಭೆಗೆ ಹಾಜರಾಗುವುದಕ್ಕೆ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ.

ಷೇರು ಪ್ರಮಾಣ ಪತ್ರ

ಸಂಘದ ಸದಸ್ಯತ್ವಕ್ಕೆ ಅರ್ಜಿ ಸಲ್ಲಿಸಿದ ಹಾಗೂ ಸದಸ್ಯತ್ವವನ್ನು ನೀಡಲಾದ ಎಲ್ಲಾ ಸದಸ್ಯರು ಸಂಘದ ಕಛೇರಿಯಿಂದ ನೀಡಲಾಗುವ ಷೇರು ಪ್ರಮಾಣ ಪತ್ರವನ್ನು ತಪ್ಪದೇ ಪಡೆಯಬೇಕಾಗಿ ಪ್ರಾರ್ಥಿಸುತ್ತೇವೆ.

ಸಂಘದಲ್ಲಿ ಲಭ್ಯವಿರುವ ಸೇವೆಗಳನ್ನು ಸದಸ್ಯರು ಉಪಯೋಗ ಪಡೆಯುವ ಬಗ್ಗೆ

ತಮಗೆ ಈ ಹಿಂದೆ, ತಿಳಿಸಿರುವಂತೆ, ಕರ್ನಾಟಕ ಸರ್ಕಾರ ಅಧಿನಿಯಮ 1959 (ತಿದ್ದುಪಡಿ) ರಲ್ಲಿ ಉಲ್ಲೇಖಿಸಿರುವಂತೆ, ಯಾವುದೇ ಸದಸ್ಯರು ವಾರ್ಷಿಕ ಸಭೆಯಲ್ಲಿ ಹಾಜರಿರುವುದು ಹಾಗೂ ಸಹಕಾರ ಸಂಘವು ನೀಡಲಾಗುವ ಕನಿಷ್ಠ ಪ್ರಮಾಣದ ಸೇವೆಗಳನ್ನು ಉಪಯೋಗಿಸಿಕ್ಕೊಂಡು, ಸಂಘದ ಚಟುವಟಿಕೆಗಳಲ್ಲಿ ಭಾಗವಹಿಸುವುದು ಕಾನೂನುರೀತ್ಯಾ ಕಡ್ಡಾಯವಾಗಿರುತ್ತದೆ. ಆದ್ದರಿಂದ ಸಂಘದಲ್ಲಿ ಲಭ್ಯವಿರುವ ಸೇವೆ/ ಸೌಲಭ್ಯಗಳನ್ನು ಉಪಯೋಗಿಸಿ ಕೊಳ್ಳಬೇಕೆಂದು, ನಮ್ಮ ಎಲ್ಲ ಸದಸ್ಯರಲ್ಲಿ ವಿನಂತಿಸಲಾಗಿದೆ.

ಸೇವೆಗಳ ವಿವರ

1. ವಿವಿಧ ಠೇವಣಿಗಳು
    - ಸದಸ್ಯರ ಉಳಿತಾಯ ಖಾತೆ **(Members Savings Account)**
    - ನಿಶ್ಚಿತ ಠೇವಣಿ (**Fixed Deposit)**
    - ಆವರ್ತಕ ಠೇವಣಿ (**Recurring Deposit)**
    - ಮರುಹೂಡಿಕೆ ಠೇವಣಿ (**Re-investment Deposit)**
    - ನಗದು ಪತ್ರಗಳು (**Cash Certificate)**
    - ಪಿಗ್ಮಿ ಠೇವಣಿ (**Pigmy Deposit)**

    ಸ್ವತಃ ಹಣ ಹಿಂಪಡೆಯುವ ಸಲುವಾಗಿ 10 ಹಾಳೆಗಳ Withdrawal Slip ನ್ನು, ನಮ್ಮ ಉಳತಾಯ ಖಾತೆ ಉಳ್ಳವರಿಗೆ, ನೀಡಲಾಗುತ್ತಿದೆ. ಇದರಿಂದ ತಮ್ಮ ಖಾತೆಯಿಂದ,

ಹಣವನ್ನು ಹಿಂಪಡೆಯಲು, ಉಪಯೋಗಿಸಬಹುದಾಗಿದ್ದು ಉಳಿತಾಯ ಖಾತೆದಾರರು, ಈ ಸೌಲಭ್ಯವನ್ನು ಉಪಯೋಗಿಸಿ ಕೊಳ್ಳಬೇಕಾಗಿ ಪ್ರಾರ್ಥನೆ.

2. ಸಾಲ ಸೌಲಭ್ಯಗಳು

1. ವೈಯಕ್ತಿಕ ಸಾಲ (Personal Loan)
2. ಅಡಮಾನ ಸಾಲ (Mortgage Loan)
3. ನಿವೇಶನ ಸಾಲ (Site Loan)
4. ಗೃಹ ಸಾಲ (Home Loan)
5. ವಾಹನ ಸಾಲ (Vehicle Loan)
6. ಚಿನ್ನಾ ಭರಣ ಸಾಲ (Gold Loan)
7. ಠೇವಣಿ ಮೇಲಿನ ಸಾಲ (Loan on Deposit)
8. ಮೀರಳತೆ ಸಾಲ (Overdraft on Deposit)
9. ಅವಧಿ ಸಾಲ/ ಉಪಕರಣ ಸಾಲ (Term Loan / Equipment Loan)

ಈ ನಮ್ಮ ಸಂಘವು ಸ್ಥಾಪನೆಯಾಗಿ ಎರಡು ವರ್ಷ ಕಳೆದಿದೆ. ಅನೇಕ ಮಹನೀಯರುಗಳು, ನಮ್ಮ ಸಂಸ್ಥೆಯ ಸ್ಥಾಪನೆ ಹಾಗೂ ಅದರ ಅಭಿವೃದ್ಧಿಗೆ ನೆರವಾಗಿದ್ದಾರೆ. ವಿಶೇಷವಾಗಿ ಸಹಕಾರ ಇಲಾಖೆ, ಸನ್ಮಾನ್ಯ ನಿಬಂಧಕರು ಮತ್ತು ಇಲಾಖೆಯ ಅಧಿಕಾರಿಗಳು, ಸದಸ್ಯರು ಕಾರಣರಾಗಿದ್ದಾರೆ. ಕೇವಲ ಎರಡು ವರ್ಷದ ಅವಧಿಯಲ್ಲಿ ಯಶಸ್ಸು ಸಾಧಿಸುವಲ್ಲಿ ಎಲ್ಲರ ಸಹಕಾರ, ಹಾರೈಕೆ ಮತ್ತು ಬೆಂಬಲ ಮುಖ್ಯ ಕಾರಣವಾಗಿರುತ್ತದೆ.

ಆಂತರಿಕ ಲೆಕ್ಕ ಪರಿಶೋಧನೆ

ಸಂಘದ ಆಂತರಿಕ ಲೆಕ್ಕ ಪರಿಶೋಧನೆಯನ್ನು ಭಾರತೀಯ ಸ್ಟೇಟ್ ಬ್ಯಾಂಕಿನ ವಿಭಾಗೀಯ ಕಛೇರಿಯಲ್ಲಿ (Zonal Manager) ನಿವೃತ್ತರಾಗಿ ಅಪಾರ ಅನುಭವವಿರುವ ಶ್ರೀ ದತ್ತಾತ್ರೇಯ ವಿ ಹೆಗಡೆಯವರು ಆಗಿಂದಾಗ್ಗೆ ನಿರಂತರವಾಗಿ ನಿರ್ವಹಿಸುತ್ತಿದ್ದಾರೆ. ಇದರಿಂದಾಗಿ, ಲೆಕ್ಕ ಪತ್ರಗಳಲ್ಲಿ ಯಾವುದೇ ನ್ಯೂನತೆಗಳು ಕಂಡುಬರದ ಹಾಗೆ ನಿಗಾ ವಹಿಸಲಾಗಿದೆ.

ಶಾಸನ ಬದ್ಧ ಲೆಕ್ಕ ಪರಿಶೋಧನೆ

ನಮ್ಮ ಸಂಘದ 2020-21 ನೇ ಸಾಲಿಗೆ ಶಾಸನ ಬದ್ಧ ಲೆಕ್ಕ ಪರಿಶೋದಿಸಲು ಶ್ರೀ ಮಲ್ಲೇಶ್ ಟಿ ಹುಲ್ಲೇಟಿ & ಕಂಪನಿಯಿಂದ ಪ್ರಸ್ತಾವನೆ ಬಂದಿರುತ್ತದೆ. ಇವರನ್ನು ಮುಂಬರುವ ಸಾಲಿಗೆ ಅಂದರೆ 2020-21 ನೇ ಸಾಲಿಗೆ ನೇಮಕಾತಿ ಮಾಡಬೇಕೆಂದು ಶಿಫಾರಸ್ಸು ಮಾಡಲಾಗಿದೆ.

ಸಿಬ್ಬಂದಿ ತರಬೇತಿ

ಸಿಬ್ಬಂದಿ ತರಬೆತೀಗೆ ಸಂಭಂದಿಸಿದಂತೆ ಸಹಕಾರ / ಬ್ಯಾಂಕಿಂಗ್ ಕ್ಷೇತ್ರದಲಿ 37 ವರ್ಷಗಳ ಅನುಭವಿರುವ ಸಲಹೆಗಾರರು, ನಮ್ಮ ಸಿಬ್ಬಂದಿ ವರ್ಗಕ್ಕೆ on the job ತರಬೇತಿಯನ್ನು ಸತತವಾಗಿ ನೀಡುತ್ತಿದ್ದಾರೆ.

ವಂದನೆಗಳು

ಈ ನಿಮ್ಮ ಸಹಕಾರಿ ಸಂಘವು ದಿನಾಂಕ: 10–4–2019ನೇ ತಾರಿಖಿಗೆ ಒಂದು ವರ್ಷ ತುಂಬಿ, ಯಾಶಸ್ಸಿನತ್ತ ಮುನ್ನಡೆಯುತ್ತಿದೆ. ಇದಕ್ಕೆ ಕಾರಣ ಕರ್ತರಾದ, ಸಹಕಾರ ಇಲಾಖೆ, ಸನ್ಮಾನ್ಯ ನಿಭಂದಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ, ಸಂಘದ ಸಲಹೆಗಾರರು, ಶಾಸನ ಲೆಕ್ಕ ಪರಿಶೋದನೆಯನ್ನು ಸಕಾಲದಲ್ಲ ನೆರೆವೇರಿಸಿ ಕೊಟ್ಟ ಶ್ರೀ ಕೆ.ಎಸ್ ನಾಗಭೂಷಣ್ ಎಂ.ಎನ್.ಎಸ್ ಅಂಡ್ಕೋ ಚಾರ್ಟರ್ಡ್ ಅಕೌಂಟೆಂಟ್ಸ್ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಆಡಳಿತ ಮಂಡಲಿಯು ವಿಶೇಷವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತದೆ. ಸಂಘದ ಪ್ರಗತಿಗೆ ಶ್ರಮಿಸಿ ಉತ್ತಮ ಮಾರ್ಗದರ್ಶನ ನೀಡುತ್ತರುವ ಆಡಳಿತ ಮಂಡಲಿ ಸದಸ್ಯರು ಹಾಗೂ ಪ್ರಾಮಾಣಿಕವಾಗಿ, ದಕ್ಷತೆಯಿಂದ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಸಿಬ್ಬಂದಿ ವರ್ಗಕ್ಕೆ ಕೃತಜ್ಞತೆ ಸಲ್ಲಿಸುತ್ತಿದೇವೆ.

ಆಡಳಿತ ಮಂಡಲಿ ಅಪ್ಪಣೆಯ ಮೇರೆಗೆ
ಸಹಿ/–
ಸಂತೋಷ್.ಜೆ
ಮು.ಕಾ.ನಿ. ಅಧಿಕಾರಿ(ಪ್ರಭಾರ)